**ಕರ್ನಾಟಕ ಸರ್ಕಾರ**

ವಿಷಯ: ಶ್ರೀ ಶಿವರಾಂ ಕೆ. ಚವ್ಹಾಣ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಭಾಲ್ಕಿ ಇವರ ವಿರುದ್ಧದ ಶಿಸ್ತು ಕ್ರಮ

ಓದಲಾಗಿದೆ: 1. ಕಾರಣ ಕೇಳುವ ನೋಟೀಸು ಸಂಖ್ಯೆ: ಗ್ರಾಅಪ/153/ವಿಸೇಬಿ/2011 ದಿನಾಂಕ:25-04-2014.
2. ಶ್ರೀ ಶಿವರಾಂ ಕೆ. ಚವ್ಹಾಣ, ಇವರ ಲಿಖಿತ ಹೇಳಿಕೆ ದಿ:19-05-2014.
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬೀದರ್ ಇವರ ಪತ್ರ ದಿನಾಂಕ: 13-11-2014.

-----

**ಪ್ರಸ್ತಾವನೆ:**

ಶ್ರೀ ಶಿವರಾಂ ಕೆ. ಚವ್ಹಾಣ, ಇವರು ಈ ಹಿಂದೆ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಭಾಲ್ಕಿ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಈ ಕೆಳಕಂಡ ಆರೋಪಗಳಿಗೆ ವಿವರಣೆ ಸಂಬಂಧಿಸಿದಂತೆ ಮೇಲೆ ಕ್ರ. ಸಂ. 1 ರಲ್ಲಿ ಓದಲಾದ ನೋಟಿಸನ್ನು ಜಾರಿಗೊಳಿಸಿ ವಿವರಣೆ ಕೋರಲಾಗಿದೆ.

**ಆರೋಪ-1**

ಶ್ರೀ ವಿಜಯಕುಮಾರ ಸೂರ್ಯವಂಶಿ, ಪಿ.ಡಿ.ಓ. ಎಂದು ನೇಮಕಗೊಂಡು ಅವರಿಗೆ ಬ್ಯಾಲಹಳ್ಳಿ ಗ್ರಾಮ ಪಂಚಾಯತ ವಹಿಸಿಕೊಡಲಾಗಿತ್ತು. ಸದರಿ ನೌಕರರಿಗೆ ಇವರ ಹಂತದಲ್ಲಿ ಹೆಚ್ಚುವರಿಯಾಗಿ ಜ್ಯಾಂತಿ ಗ್ರಾಮ ಪಂಚಾಯತನ ಪಿ.ಡಿ.ಓ ಹುದ್ದೆಯ ಪ್ರಭಾರ ವಹಿಸಿಕೊಟ್ಟಿರುತ್ತಾರೆ. ಸದರಿ ಪಿ.ಡಿ.ಓ ರವರು ದಿನಾಂಕ: 04-08-2011 ರಿಂದ 23-09-2011ರ ವರೆಗೆ ವೈದ್ಯಕೀಯ ರಜೆಯ ಮೇಲಿದ್ದು, ದಿನಾಂಕ:24-09-2011 ರಂದು ರಜೆಯಿಂದ ಹಿಂದಿರುಗಿದ ನಂತರ ಜ್ಯಾಂತಿ ಗ್ರಾಮ ಪಂಚಾಯತ್‌ನಲ್ಲಿ ಕಾರ್ಯನಿರ್ವಹಿಸಿರುತ್ತಾರೆ. ಸದರಿ ಪಿ.ಡಿ.ಓ. ರವರು ದಿನಾಂಕ: 09-11-2011 ರಂದು ಅವರ ಸ್ವ-ಗೃಹದಲ್ಲಿ ನೇಣು ಹಾಕಿಕೊಂಡು ಆತ್ಮ ಹತ್ಯೆ ಮಾಡಿಕೊಂಡಿರುತ್ತಾರೆ. ಸದರಿಯವರು ಆತ್ಮ ಹತ್ಯೆ ಮಾಡಿಕೊಳ್ಳುವ ಮುನ್ನ ಸುಸೈಡ್ ನೋಟ ಬರೆದಿರುತ್ತಾರೆ. ಸದರಿ ಸುಸೈಡ ನೋಟನಲ್ಲಿ ಚುನಾಯಿತ ಪ್ರತಿ ನಿಧಿಗಳು ಮತ್ತು ಮೇಲಾಧಿಕಾರಿಗಳ ಕಿರುಕುಳದಿಂದಾಗಿ ಆತ್ಮಹತ್ಯೆ ಮಾಡಿಕೊಳ್ಳತ್ತಿರುವುದಾಗಿ ಬರೆದಿಟ್ಟಿರುತ್ತಾರೆ. ಶ್ರೀ ಶಿವಶೆಟ್ಟಿ ಸೀತಾ, ಕಾರ್ಯದರ್ಶಿ, ಗ್ರಾಮ ಪಂಚಾಯತ್, ಬ್ಯಾಲಹಳ್ಳಿ ತಾ: ಭಾಲ್ಕಿ ಇವರು ಸ್ಥಳೀಯ ಜನ ಮತ್ತು ಚುನಾಯಿತ ಪ್ರತಿನಿಧಿಗಳೊಂದಿಗೆ ಸೇರಿ ದಿವಂಗತ ಶ್ರೀ ವಿಜಯಕುಮಾರ ಸೂರ್ಯವಂಶಿ, ಪಂಚಾಯತ ಅಭಿವೃದ್ಧಿ ಅಧಿಕಾರಿ ಇವರಿಗೆ ತೊಂದರೆ ಕೊಟ್ಟಿರುವ ಬಗ್ಗೆ ಸಹ ಅವರ ಸೂಸೈಡ ನೋಟನಲ್ಲಿ ಬರೆದಿರುತ್ತಾರೆ. ಅವರು ಒಬ್ಬ ಜವಾಬ್ದಾರಿಯುತ ತಾಲ್ಲೂಕು ಮಟ್ಟದ ಅಧಿಕಾರಿಯಾಗಿದ್ದು ಗ್ರಾಮ ಪಂಚಾಯತ್ ಪಂಚಾಯತ್ ಅಭಿವೃದ್ಧಿ ಅಧಿಕಾರಿ/ಕಾರ್ಯದರ್ಶಿಗಳ ಕಂಟ್ರೋಲಿಂಗ್ ಅಧಿಕಾರಿಯಾಗಿರುತ್ತಾರೆ. ಗ್ರಾಮ ಪಂಚಾಯತಿಯ ಚುನಾಯಿತ ಪ್ರತಿನಿಧಿಗಳು ಮತ್ತು ನೌಕರರ ಮಧ್ಯದ ಸಮಸ್ಯೆಗಳನ್ನು ಅವರ ಹಂತದಲ್ಲಿಯೇ ಪರಿಶೀಲಿಸಿ ಬಗೆಹರಿಸುವಲ್ಲಿ ಕರ್ತವ್ಯನಿರ್ಲಕ್ಷ್ಯ ವಹಿಸಿದ

**ಆರೋಪ-2**

ದಿವಂಗತ ಶ್ರೀ ವಿಜಯಕುಮಾರ ಸೂರ್ಯವಂಶಿ ಇವರು ಖಿನ್ನತೆಗೆ ಒಳಗಾಗಿ ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿ ಬರುವುದಕ್ಕೆ ಕಾರಣರಾಗಿ ಕರ್ತವ್ಯಲೋಪವೆಸಗಿದ ಮೇರೆಗೆ ಸದರಿಯವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 12 (1)(ಎ) ರನ್ವಯ ಕಾರಣ ಕೇಳುವ ನೋಟೀಸಿನೊಂದಿಗೆ ದೋಷಾರೋಪಣಾ ಪಟ್ಟಿಯನ್ನು ಜಾರಿ ಮಾಡಿ 15 ದಿನಗಳೊಳಗೆ ರಕ್ಷಣಾ ಹೇಳಿಕೆ ಸಲ್ಲಿಸುವಂತೆ ಸೂಚಿಸಲಾಗಿತ್ತು.

ಮೇಲೆ ಕ್ರಮ ಸಂಖ್ಯೆ(2) ರಲ್ಲಿ ಓದಲಾದ ಪತ್ರದಲ್ಲಿ ಶ್ರೀ ಶಿವರಾಂ ಕೆ. ಚವ್ಹಾಣ, ಇವರು ತಮ್ಮ ಮೇಲೆ ಮಾಡಲಾದ ಆರೋಪಕ್ಕೆ ಸಂಬಂಧಿಸಿದಂತೆ ಈ ಕೆಳಕಂಡಂತೆ ಲಿಖಿತ ಹೇಳಿಕೆ ನೀಡಿ ತಮ್ಮ ಮೇಲಿನ ಆರೋಪ ಕೈಬಿಡುವಂತೆ ಕೋರಿರುತ್ತಾರೆ.

ತಾವು ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಭಾಲ್ಕಿ ಇಲ್ಲಿ ದಿನಾಂಕ: 26-05-2011 ರಂದು ಕರ್ತವ್ಯಕ್ಕೆ ಹಾಜರಾಗಿದ್ದು, ದಿನಾಂಕ: 11-11-2011 ರವರೆಗೆ ತೃಪ್ತಿಕರವಾಗಿ ಕಾರ್ಯನಿರ್ವಹಿಸಿರುವುದಾಗಿಯೂ, ಈ ಅವಧಿಯಲ್ಲಿ ತಮ್ಮ ವಿರುದ್ಧ ಜನ ಪ್ರತಿನಿಧಿ ಗಳಿಂದಾಗಲೀ ಸಾರ್ವಜನಿಕರಿಂದಾಗಲಿ ಅಥವಾ ತಾಲ್ಲೂಕು ಪಂಚಾಯತಿ ವ್ಯಾಪ್ತಿಯ ನೌಕರರುಗಳಿಂದಾಗಲಿ ಯಾವುದೇ ರೀತಿಯ ದೂರುಗಳು ಇರುವುದಿಲ್ಲ. ತಾಲ್ಲೂಕು ಪಂಚಾಯತಿ ಭಾಲ್ಕಿ ವ್ಯಾಪ್ತಿಯ ಬ್ಯಾಲಹಳ್ಳಿ(ಕೆ) ಯೊಂದಿಗೆ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ ದಿವಂಗತ ಶ್ರೀ ವಿಜಯಕುಮಾರ ಸೂರ್ಯವಂಶಿ ಇವರಿಗೆ ಸೇವೆಗೆ ಹಾಜರಾಗುವ ಪೂರ್ವದಲ್ಲಿ ಮೂಲ ಗ್ರಾಮ ಪಂಚಾಯತಿ ಬ್ಯಾಲಹಳ್ಳಿ(ಕೆ) ಯೊಂದಿಗೆ ಗ್ರಾಮ ಪಂಚಾಯತಿ ಜ್ಯಾಂತಿ ಸಹ ಪ್ರಭಾರ ವಹಿಸಲಾಗಿತ್ತು. ಆದರೆ ಸದರಿಯವರು ಸಮರ್ಪಕವಾಗಿ ಅವರ ಕರ್ತವ್ಯ ನಿರ್ವಹಿಸುವಲ್ಲಿ ಬೇಜವಾಬ್ದಾರಿತನ ಅನಧಿಕೃತ ಗೈರು ಹಾಜರಿ ಹಾಗೂ ಕರ್ತವ್ಯಲೋಪ ವೆಸಗುತ್ತಿರುವುದನ್ನು ಗಮನಿಸಿ, ಬ್ಯಾಲಹಳ್ಳಿ ಗ್ರಾಮ ಪಂಚಾಯತಿ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಇತರ ಸದಸ್ಯರು ಸಾಕಷ್ಟು ಸಲ ದೂರು ಸಲ್ಲಿಸಿ ಅವರ ಕಾರ್ಯವೈಖರಿ ಕುರಿತು ಅಸಮಾಧಾನ ವ್ಯಕ್ತಪಡಿಸಿರುತ್ತಾರೆ. ಜನಪ್ರತಿನಿಧಿಗಳ ಅಹವಾಲಿನ ಮೇರೆಗೆ ದಿವಂಗತ ಶ್ರೀ ವಿಜಯಕುಮಾರ್, ಪಿ.ಡಿ.ಓ. ರವರಿಗೆ ಬೇರೆ ಕಡೆ ಸ್ಥಳ ನಿಯುಕ್ತಿಗೊಳಿಸುವಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಜಿಲ್ಲಾ ಪಂಚಾಯತ್ ಬೀದರ್ ರವರಿಗೆ ಪತ್ರ ವ್ಯವಹಾರ ಮಾಡಲಾಗಿದೆ. ಇದಲ್ಲದೆ ಬ್ಯಾಲಹಳ್ಳಿ ಗ್ರಾಮ ಪಂಚಾಯತಿ ಆಡಳಿತ ಹಿತದೃಷ್ಟಿಯನ್ನು ಗಮನದಲ್ಲಿಟ್ಟು ಕೊಂಡು ಹಾಗೂ ದಿವಂಗತ ಪಂಚಾಯತಿ ಅಭಿವೃದ್ಧಿ ಅಧಿಕಾರಿ ರವರು ವೈದ್ಯಕೀಯ ಕಾರಣ ನೀಡಿ ದಿ:04-08-2011 ರಿಂದ 23-09-2011 ರ ವರೆಗೆ ಸಲ್ಲಿಸಿರುವ ಅರ್ಜಿಯನ್ನು ಮನ್ನಿಸಿ, ಸದರಿ ಗ್ರಾಮ ಪಂಚಾಯತಿಗೆ ಪರ್ಯಾಯ ವ್ಯವಸ್ಥೆ ಮಾಡಿ ಭಾಲ್ಕಿ ತಾಲ್ಲೂಕಿನ ಯಲಬುರ್ಗಾ ಗ್ರಾಮ ಪಂಚಾಯತಿಯ ಶ್ರೀ ಮಹ್ಮದ ಖುರ್ಷಿದ್ ಅಲಿ, ಪಂಚಾಯತಿ ಅಭಿವೃದ್ಧಿ ಅಧಿಕಾರಿ ಇವರಿಗೆ ಹೆಚ್ಚುವರಿ ಪ್ರಭಾರ ವಹಿಸಿ ಆದೇಶಿಸಲಾಗಿದೆ. ಅದರಂತೆ ಜ್ಯಾಂತಿ ಗ್ರಾಮ ಪಂಚಾಯತಿ ಹೆಚ್ಚುವರಿ ಪ್ರಭಾರವನ್ನು ಶ್ರೀ ರವೀಂದ್ರ ಮುದಗಲ ಮೂಲ ಗ್ರಾಮ ಪಂಚಾಯತಿ ಮುಳಚಾಪೂರ ಇವರಿಗೆ ಹೆಚ್ಚುವರಿಯಾಗಿ ವಹಿಸಲಾಗಿದೆ. ದಿವಂಗತ ಶ್ರೀ ವಿಜಯಕುಮಾರ್ ಸೂರ್ಯವಂಶಿಯವರು ರಜೆಯಿಂದ ಹಿಂದಿರುಗಿ ಬಂದ ನಂತರ ಕೇವಲ ಜ್ಯಾಂತಿ ಗ್ರಾಮ ಪಂಚಾಯತಿ ಪ್ರಭಾರ ವಹಿಸಿಕೊಂಡು ಕಾರ್ಯನಿರ್ವಹಿಸಲು ತಿಳಿಸಲಾಗಿತ್ತು. ಆದರೆ, ಸದರಿಯವರು ಜ್ಯಾಂತಿ ಗ್ರಾಮ ಪಂಚಾಯತಿಯಲ್ಲಿ ಸಹ ಅಸಡ್ಡೆ ಮನೋಭಾವನೆ ವ್ಯಕ್ತಪಡಿಸಿ ತಮ್ಮ ಸರ್ಕಾರಿ ಕರ್ತವ್ಯ ನಿರ್ವಹಿಸುವಲ್ಲಿ ಹಾಗೂ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ಬಸವ ವಸತಿ ಯೋಜನೆಯನ್ನು ಅನುಷ್ಠಾನಗೊಳಿಸುವಲ್ಲಿ ಸಂಪೂರ್ಣ ವಿಫಲರಾಗಿರುತ್ತಾರೆ. ಹೀಗಾಗಿ ಸಾರ್ವಜನಿಕರಿಂದ ಹಾಗೂ ಜನ ಪ್ರತಿನಿಧಿಗಳ ಆರೋಪಗಳಿಗೆ ಬೇಸತ್ತು ಸ್ಪಂದಿಸಲು ವಿಫಲರಾಗಿರುತ್ತಾರೆ. ಅಲ್ಲದೆ ಅವರ ಕೌಟುಂಬಿಕ ಸಮಸ್ಯೆಗಳಿಗೆ ಒಳಗಾಗಿ ಆತ್ಮಹತ್ಯೆ ಮಾಡಿಕೊಂಡಿರುತ್ತಾರೆ ವಿನಃ ಮೇಲಾಧಿಕಾರಿಗಳಿಂದ ಯಾವುದೇ ತೊಂದರೆ ಆಗಿರುವುದಿಲ್ಲವೆಂದು ತಮ್ಮ ವಿರುದ್ಧದ ಆರೋಪವನ್ನು ಅಲ್ಲಗಳೆದಿದ್ದಾರೆ.

ದಿವಂಗತ ಶ್ರೀ ವಿಜಯಕುಮಾರ್ ಪಿ.ಡಿ.ಓ. ರವರು ವೈದ್ಯಕೀಯ ರಜೆ ಮುಗಿಸಿಕೊಂಡು ಕರ್ತವ್ಯಕ್ಕೆ ಹಾಜರಾದ ನಂತರ ಅವರ ಕೋರಿಕೆಯಂತೆ ಮೂಲ ಸ್ಥಳವಾದ ಬ್ಯಾಲಹಳ್ಳಿ (ಕೆ) ಗ್ರಾಮ ಪಂಚಾಯತಿ ಬದಲಾಗಿ ಗ್ರಾಮ ಪಂಚಾಯತಿ ಜ್ಯಾಂತಿಯಲ್ಲಿ ನಿಯುಕ್ತಿಗೊಳಿಸಿ ಆದೇಶಿಸಲಾಗಿದೆ. ಗ್ರಾಮ ಪಂಚಾಯತಿಯಲ್ಲಿ ಇವರು ತೀವ್ರತರವಾದ ಸಮಸ್ಯೆ ಎದುರಿಸಿದ್ದಾರೆ ಎಂಬುದನ್ನು ಅಲ್ಲಗಳೆದಿದ್ದಾರೆ. ಹಾಗೂ ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 306/ಜಿಪಸ/2011 /ಬೆಂಗಳೂರು ದಿ:19-10-2011 ರ ಪ್ರತಿಯು ದಿವಂಗತ ಶ್ರೀ ವಿಜಯಕುಮಾರ್ ಸೂರ್ಯವಂಶಿಯವರು ಗ್ರಾಮ ಪಂಚಾಯತಿ ಬ್ಯಾಲಹಳ್ಳಿ (ಕೆ) ಇವರು ಆತ್ಮಹತ್ಯೆ ಮಾಡಿಕೊಳ್ಳುವ ಮುಂಚೆ ತಾಲ್ಲೂಕು ಪಂಚಾಯತಿ ಭಾಲ್ಕಿ ಕಛೇರಿಗೆ ಸ್ವೀಕೃತವಾಗಿರುವುದಿಲ್ಲ. ಆದರೂ ಕೂಡಾ ಪ್ರತಿ ತಿಂಗಳೂ ದಿ: 14 ಮತ್ತು 28 ರಂದು ಎಲ್ಲಾ 35 ಗ್ರಾಮ

ಪಂಚಾಯತಿಗಳ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಮತ್ತು ಕಾರ್ಯದರ್ಶಿ ಹಾಗೂ ಕಂಪ್ಯೂಟರ್ ಆಪರೇಟರ್‌ಗಳ ಪ್ರಗತಿ ಪರಿಶೀಲನೆ ಸಭೆ ತೆಗೆದುಕೊಳ್ಳುತ್ತಿದ್ದ ಸಂದರ್ಭದಲ್ಲಿ ಅವರ ವೈಯಕ್ತಿಕ ಸಮಸ್ಯೆಗಳನ್ನು ಸಹ ಆಲಿಸಿ, ಸಮಸ್ಯೆಗಳಿಗೆ ಸ್ಪಂದಿಸಿರುವುದಾಗಿ ತಿಳಿಸಿ, ತಮ್ಮ ವಿರುದ್ಧ ಮಾಡಲಾದ ಆರೋಪಗಳನ್ನು ಅಲ್ಲಗಳೆಯುತ್ತಾ, ಆರೋಪ ಮುಕ್ತರನ್ನಾಗಿಸಲು ಕೋರಿರುತ್ತಾರೆ.

ಮೇಲೆ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ಪತ್ರದಲ್ಲಿ ಆಪಾದಿತ ಅಧಿಕಾರಿ ಸಲ್ಲಿಸಿರುವ ದಿನಾಂಕ:19-05-2014 ರ ಲಿಖಿತ ಹೇಳಿಕೆಯ ಬಗ್ಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬೀದರ್ ಇವರ ಅಭಿಪ್ರಾಯವನ್ನು ಪಡೆಯಲಾಗಿದ್ದು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬೀದರ್ ಇವರ ಅಭಿಪ್ರಾಯ ಹಾಗೂ ಆಪಾದಿತ ಅಧಿಕಾರಿಯು ಸಲ್ಲಿಸಿರುವ ದಿನಾಂಕ 19-05-2014ರ ಲಿಖಿತ ಹೇಳಿಕೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 153 ವಿಸೇಬಿ 2011 ಬೆಂಗಳೂರು, ದಿನಾಂಕ:22-01-2015.**

ಮೇಲ್ಕಂಡ ಅಂಶಗಳ ಕಾರಣಗಳಿಂದಾಗಿ, ಶ್ರೀ ಶಿವರಾಂ ಕೆ. ಚವ್ಹಾಣ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಭಾಲ್ಕಿ ಪ್ರಸ್ತುತ ನಿವೃತ್ತಿ ಇವರ ವಿರುದ್ಧ ದಿನಾಂಕ: 25-04-2014 ರ ನೋಟೀಸಿನಲ್ಲಿ ಮಾಡಿರುವ ಆರೋಪಗಳಿಂದ ದೋಷಮುಕ್ತಗೊಳಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ನಾಗರಾಜ್ ಆರ್.),
ಸರ್ಕಾರದ ಅಧೀನ ಕಾರ್ಯದರ್ಶಿ,(ಸೇ.ಬಿ & ಸಿ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಗೆ:

1. ಮಹಾಲೇಖಪಾಲರು (ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬೀದರ್
3. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಭಾಲ್ಕಿ, ಬೀದರ್ ಜಿಲ್ಲೆ
4. ಸಂಬಂಧಿಸಿದ ಅಧಿಕಾರಿಗೆ (ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬೀದರ್ ಇವರ ಮುಖಾಂತರ)
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಸರ್ಕಾರದ ಕಾರ್ಯದರ್ಶಿ (ಪಂ.ರಾಜ್) /ಅಪರ ಕಾರ್ಯದರ್ಶಿ (ಆಡಳಿತ), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರ ಆಪ್ತ ಸಹಾಯಕರು.
6. ವಿಶೇಷಾಧಿಕಾರಿ, ಗಣಕ ಕೋಶ, ಗ್ರಾ.ಅ.ಪಂ.ರಾಜ್ ಇಲಾಖೆ.
7. ಮಾಹಿತಿ ಕೇಂದ್ರ / ಶಾಖಾ ರಕ್ಷಕ ಕಡತ / ಹೆಚ್ಚುವರಿ ಪ್ರತಿ.